ಡಿ.ವಿ. ಪ್ರಹ್ಲಾದ್

# ಮಲ್ಹಾರ ಮುಗಿದ ಮೇಲೆ

**ಇತ್ತೀಚೆಗೆ ನಿಧನರಾದ ಕವಿ ಜಿ.ಕೆ. ರವೀಂದ್ರಕುಮಾರ್ (25–06– 1961 9–10–2019) ಅವರ ಬರಹ ಮತ್ತು ವ್ಯಕ್ತಿತ್ವವನ್ನು ಪರಿಚಯಿಸುವ ಬರಹ ಇಲ್ಲಿದೆ.**

ಅನಾಯಾಸ ಮರಣ ಎಲ್ಲ ಮನುಷ್ಯರ ಆಶಯ. ಆದರೆ, ಅಂಥ ಅನಿರೀಕ್ಷಿತ ಅನಾಯಾಸ ಮರಣ ಪಡೆದವರ ಸುತ್ತಲಿನ ಜನ ತತ್ತರಿಸುವುದು ವಾಸ್ತವ. ಮನುಷ್ಯರ ಆಶಯ, ವಾಸ್ತವಗಳೂ ಬೇರೆಯೇ ಆಗಿರುತ್ತದೆ. ಕವಿ ಮಿತ್ರ ಜಿ.ಕೆ. ರವೀಂದ್ರಕುಮಾರರ ಅನಿರೀಕ್ಷಿತ, ಅನಪೇಕ್ಷಿತ ನಿರ್ಗಮನವನ್ನೇ ನೋಡಿದರೆ, ಕೊನೆಗೂ 'ಸಾವು' ನಮ್ಮ ಬುದ್ಧಿತರ್ಕಗಳ ಎದುರು ನಿಗೂಢವಾಗೇ ತೋರುತ್ತದೆ. ಅದರ ಮುಂದೆ ನಮ್ಮ ನಿಸ್ತೇಜ ವಿವರಣೆಗಳೂ ಸೋತು ನಿಲ್ಲುತ್ತವೆ. ಕಾವ್ಯ ಕೂಡ ಮನುಷ್ಯ ತನ್ನ ಸಾವಿನ ವಿರುದ್ಧ ಹೂಡಿದ ಯುದ್ಧದ ಹಾಗೇ ತೋರುತ್ತದೆ. ಕಾಲದ ಬೀಸು ಹೊಡೆತದಲ್ಲಿ ಮಣ್ಣಾಗಿ ಮುಗಿಯುವ ಎಲ್ಲ ಸಂಗತಿಗಳ ನಡುವೆ, ಕೆಲ ಕಾಲ ಹಲವಾದರೂ ಸಾಲು ಚಿರವಾಗಿ ನಿಂತರೆ ಧನ್ಯ ಆ ಕವಿ.

ರವೀಂದ್ರಕುಮಾರರ ಕಾವ್ಯ ಯಾನಕ್ಕೆ ಇದು ಬೆಳ್ಳಿ ಹಬ್ಬದ ವರ್ಷ. 1994ರಲ್ಲಿ 'ಸಂಚಯ'ದ ಮೂಲಕ ಅವರ ಮೊದಲ ಕಾವ್ಯ ಸಂಕಲನ 'ಸಿಕಾಡ' ಪ್ರಕಟಿಸಿದೆವು. ಆ ನಂತರದಲ್ಲಿ, 'ಪ್ಯಾಂಜಿಯಾ' (1997), 'ಕದವಿಲ್ಲದ ಊರಲ್ಲಿ' (2001), 'ಒಂದು ನೂಲಿನ ಜಾಡು' (2007), 'ಮರವನಪ್ಪಿದ ಬಳ್ಳಿ' (2014) ಈಚೆಗೆ ಅವರ ಸಮಗ್ರ ಕಾವ್ಯದ ಪ್ರಕಟಣೆಯ ತಯಾರಿಯೂ ನಡೆದಿತ್ತು. 'ಸಿಕಾಡ'ದಿಂದ 'ಪ್ರಜಾವಾಣಿ'ಯಲ್ಲಿ ಕೆಲ ದಿನಗಳ ಹಿಂದೆ ಪ್ರಕಟಗೊಂಡ 'ಕತೆ ಮುಗಿದ ಮೇಲೆ...' ಕವಿತೆಯ ತನಕ ರವೀಂದ್ರಕುಮಾರರ ಸಾಹಿತ್ಯ ಯಾನ ಯಾವ ಅಬ್ಬರವೂ ಇಲ್ಲದ, ತನ್ನ ಪಾಡಿಗೆ ತಾನು ಹರಿದ ತೊರೆ. ಆ ಕಾಲಕ್ಕೆ ಇನ್ನೂ ಉಳಿದಿದ್ದ ಬಂಡಾಯದ ಸಾಮಾಜಿಕ ನೆಲೆಯ ಆಶಯಗಳ ಛಾಯೆ ಅವರ ಮೊದಲ ಸಂಕಲನದ ಎರಡನೇ ಭಾಗದ ಕವಿತೆಗಳಲ್ಲಿ ದಟ್ಟವಾಗಿದೆ. ಇದನ್ನೇ ಹಿರಿಯ ವಿಮರ್ಶಕ ಜಿ.ಎಸ್. ಆಮೂರರು ಅವರ ದಲಿತ ಕೇಂದ್ರದ ಕಾವ್ಯದ ನೆಲೆಯಾಗಿಯೂ ಗುರುತಿಸುತ್ತಾರೆ, ರವೀಂದ್ರಕುಮಾರರು ನವ್ಯದ ಕಾವ್ಯ ಶಿಲ್ಪದ ಬಗೆಗಿನ ಪ್ರಯೋಗ ಹಾಗೂ ಪರಿಣತಿ ಎರಡನ್ನೂ ಮೊದಲ ಸಂಕಲನದಲ್ಲೇ ಸಾಧಿಸಿದ್ದರು. ಅದೇ ಕಾರಣಕ್ಕೆ ಕೊಂಚ ತೆಳುವಾಗಿ ಹೇಳಿಕೆಗಳ